ಇ) ಇದು ರಾಜ್ಯ ಸರ್ಕಾರಿ ನೌಕರರ ಆತಂಕಕ್ಕೆ ಕಾರಣವಾಗಿರುವುದು ನಿಜವೇ;

ಈ) ಇದಕ್ಕಾಗಿ ಪ್ರತ್ಯೇಕ ಮಸೂದೆಯನ್ನು ಜಾರಿ ಮಾಡಲಾಗಿದೆಯೇ

ಉ) ಯಾವಾಗ ಮಾಡಲಾಯಿತು;

ಊ) ಈ ಎಲ್ಲಾ ಪ್ರಶ್ನಾವಳಿಗಳನ್ನು ಸಂಗ್ರಹಿಸಿ ಕಡ್ಡಾಯ ನಿವೃತ್ತಿ ಅಥವಾ ವಿ.ಆರ್.ಎಸ್ ಕಡ್ಡಾಯ ನಿವೃತ್ತಿ ಅಥವಾ ವಿ.ಆರ್.ಎಸ್. ಯೋಜನೆಯನ್ನು ಜಾರಿಗೆ ತರಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಯವರು ಹಾಗೂ ಹಣಕಾಸು ಸಚಿವರು):

ಅ) ಹೌದು.

ಆ) ಮಾನವ ಸಂಪನ್ಮೂಲ ನಿರ್ವಹಣೆಯ ಕಾರ್ಯವನ್ನು ದಕ್ಷತೆಯಿಂದ ನಿರ್ವಹಿಸುವುದು ಅವಶ್ಯಕತೆಯಾಗಿದ್ದು ಇದಕ್ಕಾಗಿ ಎಲ್ಲಾ ಸರ್ಕಾರಿ ಇಲಾಖೆಗಳಿಗೂ ಹಾಗೂ ಇತರೆ ಭಾಗಗಳಿಗೆ ಸಾಮಾನ್ಯವಾಗಿ ಅನ್ವಯಿಸುವಂತಹ ಮಾನವ ಸಂಪನ್ಮೂಲ ಮಾಹಿತಿಯನ್ನು ಕಲೆ ಹಾಕಲಾಗುತ್ತಿದೆ. ಉತ್ತಮ ಆರ್ಥಿಕ ನಿರ್ವಹಣೆಗಾಗಿ, ಸಂಬಳ ಸಂಬಂಧ ಪಟ್ಟ ವಚ್ಚೆಗಳನ್ನು ಅಂದಾಜಿಸಲು ಆಡಳಿತಗಾರರಿಗೆ ನೆರವಾಗುವುದಲ್ಲದೆ, ಕರ್ನಾಟಕ ಸರ್ಕಾರದಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಯನ್ನು ಸುಧಾರಿಸಲು ಮತ್ತು ಸರ್ಕಾರದ ಎಲ್ಲಾ ನೌಕರರ ನಿಖರವಾದ ಮತ್ತು ಕಾರ್ಯೋಜಿತ ವೇತನ ವಿವರಗಳನ್ನು ಪಡೆಯಲು, ಸರ್ಕಾರದಲ್ಲಿ ಉತ್ಪಾದಕತೆ ಮತ್ತು ದಕ್ಷತೆಯನ್ನು ಸುಧಾರಿಸುವ ಅವಶ್ಯಕತೆಯನ್ನು ಮನಗಂಡು ಮಾನವ ಸಂಪನ್ಮೂಲ ನಿರ್ವಹಣೆ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.

ಇ) ಇಲ್ಲ.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಇಲ್ಲ.

375 (405) ಶ್ರೀ ಸುನೀಲ್ ಕುಮಾರ್ ವಿ. (ಕಾರ್ಕಳ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರಾವಳಿ ಮೀನುಗಾರರ ಸಮಸ್ಯೆ – ಬೇಡಿಕೆಗಳ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ಭಾರತೀಯ ಕಡಲುಗಳಲ್ಲಿ ವಿದೇಶಿ ಮೀನುಗಾರಿಕಾ ಕಂಪನಿಗಳಿಗೆ ಮುಕ್ತ ಅವಕಾಶವನ್ನು ಸರ್ಕಾರ ಕಲ್ಪಿಸಿದೆಯೆ;

ಇ) ಇದರಿಂದಾಗಿ ಸ್ಥಳೀಯ ಮೀನುಗಾರರಿಗೆ ತೊಂದರೆಯಾಗುವುದೆಂದು ಸರ್ಕಾರ ಭಾವಿಸುವುದಿಲ್ಲವೇ;

ಈ) ಬದುಕಿಗಾಗಿ ಮೀನುಗಾರರು ಹೋರಾಟ ನಡೆಸುತ್ತಿರುವ ಈ ಸಂದರ್ಭದಲ್ಲಿ ಅವರಿಗೆ ಸರ್ಕಾರದ ನೆರವೇನು;

ಉ) ಅಲ್ಲದೇ ಅಳ ಸಮುದ್ರದ ಅಕ್ರಮ ವಿದೇಶಿ ಮೀನುಗಾರಿಕೆ ನಿಷೇಧಿಸಲು ಸರ್ಕಾರ ಮುಂದಾಗಿಲ್ಲದಿರಲು ಕಾರಣವೇನು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯ ಮಂತ್ರಿಗಳು):

ಅ) ಕರಾವಳಿ ಮೀನುಗಾರರ ಸಮಸ್ಯೆಗಳ/ಬೇಡಿಕೆಗಳ ನಿವಾರಣೆಗೆ ಸರ್ಕಾರವು ಸಕಾಲಿಕ ಯೋಜನೆಗಳನ್ನು ಹಮ್ಮಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ. ಉದಾಹರಣೆಗೆ:– ಕಡಲ ಮೀನುಗಾರಿಕೆಯಲ್ಲಿ ಉಪಯೋಗಿಸುವ ಡೀಸೆಲ್ ಮೇಲಿನ ರಾಜ್ಯ ಮಾರಾಟ ಕರ ವಿನಾಯಿತಿ ಯೋಜನೆ, ಕೇಂದ್ರ ಪುರಸ್ಕೃತ ಯಾಂತ್ರಿಕ ಮೀನುಗಾರಿಕೆ ದೋಣಿಗಳು ಬಳಸುವ ಡೀಸಲ್ ಮೇಲಿನ ಕೇಂದ್ರ ಅಬ್ಕಾರಿ ಶುಲ್ಕ ರಿಯಾಯಿತಿ ಯೋಜನೆ, ನಾಡ ದೋಣಿಗಳ ಯಾಂತ್ರೀಕರಣ ಯೋಜನೆ, ಮೀನುಗಾರಿಕೆ ಬಂದರು ಮತ್ತು ಇಳಿದಾಣಗಳ ನಿರ್ಮಾಣ, ಅಭಿವೃದ್ಧಿ ಮತ್ತು ನಿರ್ವಹಣೆ ಯೋಜನೆ, ಮೀನುಗಾರಿಕೆ ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆ, ಮೀನುಗಾರರ ವಸತಿ ಯೋಜನೆ, ಮೀನುಗಾರರ ಉಳಿತಾಯ ಮತ್ತು ಪರಿಹಾರ ಯೋಜನೆ, ಆರ್.ಐ.ಡಿ.ಎಫ್ ಯೋಜನೆಯಡಿ ವಿವಿಧ ಮೂಲಭೂತ ಸೌಕರ್ಯಗಳ ನಿರ್ಮಾಣ ಯೋಜನೆ, ಮೀನುಗಾರರ ಸಂಕಷ್ಟ ಪರಿಹಾರ ನಿಧಿ ಯೋಜನೆ ಮತ್ತು ಕೇಂದ್ರ ಪುರಸ್ಕೃತ ಮೀನುಗಾರರ ಗುಂಪು ವಿಮಾ ಯೋಜನೆ ಇತ್ಯಾದಿಗಳು.

ಆ) ಇದು ಭಾರತ ಸರ್ಕಾರದ ವ್ಯಾಪ್ತಿಗೆ ಸೇರಿರುವ ವಿಷಯ.

ಇ) ಸ್ಥಳೀಯ ಮೀನುಗಾರರ ಚಟುವಟಿಕೆಗಳು ತೀರ ಪ್ರದೇಶದ ಕರಾವಳಿಗೆ ಸೀಮಿತವಾಗಿದ್ದರೂ ಸಹ ಅಳ ಸಮುದ್ರ ಮೀನುಗಾರಿಕೆಯ ಪರಿಣಾಮದಿಂದ, ತೀರ ಪ್ರದೇಶದಲ್ಲಿ ಮೀನುಗಳು ದೊರಕುವ ಪ್ರಮಾಣ ಕಡಿಮೆಯಾಗುತ್ತಿದೆ ಎಂಬುದು ಮೀನುಗಾರರ ಅಭಿಪ್ರಾಯ. ಆದರೆ ಇದಕ್ಕೆ ವೈಜ್ಞಾನಿಕ ಪುಷ್ಟೀಕರಣವಿರುವುದಿಲ್ಲ.

ಈ) ಆಳ ಸಮುದ್ರದ ಮೀನುಗಾರಿಕೆಯಿಂದ ರಾಜ್ಯದ ಮೀನುಗಾರರ ಜೀವನಕ್ಕೆ ಕಷ್ಟವಾಗುವಂತಹ ದುಷ್ಪರಿಣಾಮಗಳು ಉಂಟಾಗುತ್ತಿಲ್ಲ. ಅದಾಗ್ಯೂ ಸರ್ಕಾರವು ಹಲವಾರು ನೆರವಿನ ಹಾಗೂ ಕಲ್ಯಾಣ ಯೋಜನೆಗಳನ್ನು ಹಮ್ಮಿಕೊಂಡು ಮೀನುಗಾರರ ಏಳಿಗೆಗೆ ಶ್ರಮಿಸುತ್ತಿದೆ.

ಉ) ಇದು ಭಾರತ ಸರ್ಕಾರದ ವ್ಯಾಪ್ತಿಗೆ ಸೇರಿರುವ ವಿಷಯ.

376(938) ಶ್ರೀ ವೈಜ್ಯನಾಥ ಪಾಟೀಲ್ (ಚಿಂಚೋಳಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಿಂಚೋಳಿ ತಾಲ್ಲೂಕಿನಲ್ಲಿ ಮಕ್ಕಳ ಮಾರಾಟವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಅದರ ಬಗ್ಗೆ ವಿಚಾರಣೆ ನಡೆಯುತ್ತಿದೆಯೇ;

ಇ) ವಿಚಾರಣೆ ನಡೆಯುತ್ತಿದ್ದಲ್ಲಿ, ಅದು ಈಗ ಯಾವ ಹಂತದಲ್ಲಿದೆ;

ಈ) ಮಕ್ಕಳ ಮಾರಾಟ ನಿಲ್ಲಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು):

ಅ) ಬಂದಿರುತ್ತದೆ.

ಆ) ತನಿಖೆ ನಡೆಯಲ್ಪಟ್ಟಿದೆ.

ಇ) ತನಿಖೆಯ ನಂತರ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದು, ವಿಚಾರಣೆ ಪ್ರಕ್ರಿಯೆಯಲ್ಲಿರುತ್ತದೆ.

ಈ) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಪೊಲೀಸ್ ಇಲಾಖೆ ಸೂಕ್ತ ಕ್ರಮ ಕೈಗೊಂಡಿರುತ್ತದೆ.